# ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 **www.shimul.coop**


ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಮಾರುಕಟ್ಟೆ/ಟೆಂಡರ್/00008/2017–18/2090 **ದಿನಾಂಕ: 06.06.2017**

## – :ಸಾರಿಗೆ ವಾಹನಗಳನ್ನು ಒದಗಿಸಲು ದ್ವೈವಾರ್ಷಿಕ ಅವಧಿ ಗುತ್ತಿಗೆ ಬಗ್ಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲು ಶೇಖರಣೆ/ವಿತರಣೆ ಮಾಡಲು ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು / ಇನ್ಸೂಲೇಟೆಡ್ ವಾಹನಗಳನ್ನು, ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | ದಿನಾಂಕ: 12.06.2017 ರಿಂದ |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | ದಿನಾಂಕ: 11.07.2017 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | ದಿನಾಂಕ: 13.07.2017 ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | ದಿನಾಂಕ: 15.07.2017 ರಂದು ಬೆಳಿಗ್ಗೆ: 11.30 ಗಂಟೆಯ ನಂತರ |

ಈ ಕೆಳಗೆ ನಮೂದಿಸಿರುವ ಹಾಲು ಶೇಖರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ 2005 ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನ ಒದಗಿಸಲು **ಎರಡು ವರ್ಷದ ಅವಧಿ ಅಥವಾ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ** ಮತ್ತು ಶಿವಮೊಗ್ಗ/ದಾವಣಗೆರೆ ಡೈರಿಯಿಂದ ವಿವಿಧ ನಗರಗಳಿಗೆ ಬೆಳಿಗ್ಗೆ/ಸಂಜೆ ಎರಡು ಸರತಿಗಳಲ್ಲಿಯೂ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ ಮಾಡಲು 2006 ರ ಅಥವಾ ನಂತರದ ಸಾಲಿನ ಇನ್ಸುಲೇಟೆಡ್ ಬಾಡಿಯುಳ್ಳ ವಾಹವನ್ನು **02 ವರ್ಷದ ಅವಧಿಗೆ** ವಾಹನ ಮಾಲೀಕರಿಂದ ವಾಹನಗಳನ್ನು ಬಾಡಿಗೆ/ಗುತ್ತಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಲಾಗಿದೆ. :–

| ಮಾರ್ಗದ ಸಂಖ್ಯೆ | ಹಾಲು ಶೇಖರಣಾ/ವಿತರಣಾ ಮಾರ್ಗದ ಹೆಸರು/ವಿವರ | ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ` | ಭದ್ರತಾ ಠೇವಣಿ ` |
|---|---|---|---|---|---|
| 1 | ಬಸವೇಶ್ವರ–1 ಹಾಲು ಶೇಖರಣಾ ಮಾರ್ಗ (ಚಿತ್ರದುರ್ಗ ಶೀ.ಕೇಂದ್ರ ಮಾಡನಾಯಕನಹಳ್ಳಿ, ಗುಡ್ಡದರಂಗವ್ವನಹಳ್ಳಿ, ಮಲ್ಲಾಪುರ ಚಿತ್ರದುರ್ಗ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 60 ಕಿ.ಮೀ | 25,000/– | 30,000/– |
| 2 | ಪರಶುರಾಮಪುರ –3 ಹಾಲು ಶೇಖರಣಾ ಮಾರ್ಗ ( ಚಳ್ಳಕೆರೆ ಶೀ.ಕೇಂದ್ರ ಗೊರಲಕಟ್ಟೆ, ನಗರಂಗೆರೆ, ನರಹರಿನಗರ, ಹೊಟ್ಟೆಪ್ಪನಹಳ್ಳಿ ಚಳ್ಳಕೆರೆ ಶೀ.ಕೇಂದ್ರ) | 2.5 ಟನ್ | 54 ಕಿ.ಮೀ | 30,000/– | 40,000/– |
| 3 | ವೀರಮದಕರಿ ಹಾಲುಶೇಖರಣಾ ಮಾರ್ಗ ( ಚಳ್ಳಕೆರೆ ಶೀ.ಕೇಂದ್ರ ಚಿಕ್ಕೋಬನಹಳ್ಳಿ, ಮುಸ್ಟಲಗಮ್ಮಿ, ಅಬ್ಬೇನಹಳ್ಳಿ, ಮಲ್ಲೂರಹಟ್ಟಿ, ನಾಯಕನಹಟ್ಟಿ, ಚಳ್ಳಕೆರೆ ಶೀ.ಕೇಂದ್ರ ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 240 ಕಿ.ಮೀ | 25,000/– | 30,000/– |
| 4 | ಮೊಳಕಾಲ್ಮೂರು–1 ಹಾಲು ಶೇಖರಣಾ ಮಾರ್ಗ ( ಬಿ.ಜಿ.ಕೆರೆ ಶೀ.ಕೇಂದ್ರ ಹಿರೇಕೆರೆಹಳ್ಳಿ, ರಾಯಾಪುರ, ಸಿದ್ದಯ್ಯನಕೋಟೆ, ತುಮಕೂರ್ಲಹಳ್ಳಿ, ಬಿ.ಜಿ.ಕೆರೆ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 146 ಕಿ.ಮೀ | 25,000/– | 30,000/– |
| 5 | (ಎ) ಹೊಂಬಾಳೆ ಷಟಲ್ ಮಾರ್ಗ–ಸಿದ್ದನಮಠ, ಮಲ್ಲೇನಹಳ್ಳಿ, ಹೆಚ್.ಮಲ್ಲೇನಹಳ್ಳಿ, ಅಂದನೂರು,ಗ್ಯಾರೆಹಳ್ಳಿ,ಹೊಂಬಾಳೆಮಾರ್ಗಕ್ಕೆನೀಡುವುದು)<br>(ಬಿ) ಹೊಂಬಾಳೆ ಷಟಲ್ ಮಾರ್ಗ–ಚಿತ್ರದುರ್ಗ ಶೀ.ಕೇಂದ್ರ ಸಿದ್ದನಮಠ, ಮಲ್ಲೇನಹಳ್ಳಿ, ಹೆಚ್.ಮಲ್ಲೇನಹಳ್ಳಿ, ಅಂದನೂರು, ಗ್ಯಾರೆಹಳ್ಳಿ, ಚಿತ್ರದುರ್ಗ ಶೀ.ಕೇಂದ್ರ | ಟಾಟಾ ಏಸ್ | ಎ)64 ಕಿ.ಮೀ<br>ಬಿ) 208 ಕಿ.ಮೀ | 10,000/– | 30,000/– |
| 6 | ತೀರ್ಥಹಳ್ಳಿ ಹಾಲು ವಿತರಣಾ ಮಾರ್ಗ :– ಶಿವಮೊಗ್ಗ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಗಾಜನೂರು, ಮಂಡಗದ್ದೆ, ತುದೂರು, ಬೆಜ್ಜವಳ್ಳಿ, ಕುಡುಮಲ್ಲಿಗೆ ಮತ್ತು ತೀರ್ಥಹಳ್ಳಿ ಪಟ್ಟಣದಲ್ಲಿ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | 500 ಕ್ರೇಟು | 166 ಕಿ.ಮೀ<br>(ದಿನಕ್ಕೆ ಒಂದು ಸರತಿ) | 30,000/– | 2,50,000/– |
| 7 | ಬಸವಾಪಟ್ಟಣ ಹಾಲು ವಿತರಣಾ ಮಾರ್ಗ : ಶಿವಮೊಗ್ಗ ಡೈರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಭದ್ರಾವತಿ, ಕೈಮರ, ಸಾಸ್ವೇಹಳ್ಳಿ, ಬಸವಾಪಟ್ಟಣ, ಮುಂತಾದ ಗ್ರಾಮಾಂತರ ಪ್ರದೇಶಗಳಲ್ಲಿ ಡೀಲರ್‌ಗಳಿಗೆ ಹಾಲು ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | 250 ಕ್ರೇಟು | 140 ಕಿ.ಮೀ<br>(ದಿನಕ್ಕೆ ಒಂದು ಸರತಿ) | 30,000/– | 1,50,000/– |
| 8 | ಉಕ್ಕಡಗಾತ್ರಿ ಹಾಲು ವಿತರಣಾ ಮಾರ್ಗ – ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಹರಿಹರ, ಕುಮಾರಪಟ್ಟಣಂ ಉಕ್ಕಡಗಾತ್ರಿ ಹಾಗೂ ಇತರೆ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ಜಮಾ ಮಾಡುವುದು. | ಗೂಡ್ಸ್ ಆಟೋ | 75 ಕಿ.ಮೀ<br>(ದಿನಕ್ಕೆ ಒಂದು ಸರತಿ) | 25,000/– | 50,000/– |
| 9 | ಬಿಳಿಚೋಡು–ಜಗಳೂರು ಹಾಲು ವಿತರಣಾ ಮಾರ್ಗ : ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಬಿಳಿಚೋಡು, ಜಗಳೂರು ಹಾಗೂ ಇತರೆ ಗ್ರಾಮಾಂತರ ಪ್ರದೇಶಗಳಲ್ಲಿ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ಜಮಾ ಮಾಡುವುದು. | 1.5 ಟನ್ | 115 ಕಿ.ಮೀ<br>(ದಿನಕ್ಕೆ ಒಂದು ಸರತಿ) | 25,000/– | 1,00,000/– |


**ಮುಂದುವರೆದಿದೆ......**


❖ ದಿನಾಂಕ:14.06.2017ರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

<u>ನಿಬಂಧನೆ ಮತ್ತು ಷರತ್ತುಗಳು</u>

1. ಕ್ರ.ಸಂ 1 ರಿಂದ 9 ರವರೆಗಿನ ಹಾಲು ಶೇಖರಣೆ/ವಿತರಣೆ ಮಾರ್ಗಗಳಿಗೆ ವಾಹನ ಹೊಂದಿಲ್ಲದವರು ಸಹ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಇ-ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.
3. ಕನಿಷ್ಠ ಇ.ಎಂ.ಡಿ. ರೂ. 10,000/- ಆದರೆ ಶೇಖರಣೆ/ವಿತರಣೆ ಮಾರ್ಗದ ವಾಹನಗಳಿಗೆ, ಮ್ಯಾಕ್ಸ್ ಪಿಕ್‌ಅಪ್/ ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. ಕ್ರ.ಸಂ 5 ರ ಹೊಂಬಾಳೆ ಷಟಲ್ ಮಾರ್ಗದಲ್ಲಿ ಸೂಚಿಸಿರುವ ಸಂಘಗಳಲ್ಲಿ ಹಾಲು ಶೇಖರಣೆಯು ಕಡಿಮೆ ಇದ್ದಾಗ ಹಾಲನ್ನು ಬಿ.ದುರ್ಗ ಬಳಿ ಹೊಂಬಾಳೆ ಮಾರ್ಗಕ್ಕೆ ನೀಡುವುದು. ಹಾಲಿನ ಸಂಗ್ರಹಣೆಯು ಹೆಚ್ಚಿರುವ ಸಂಧರ್ಭದಲ್ಲಿ /ಸುಗ್ಗಿ ಕಾಲದಲ್ಲಿ ಹಾಲನ್ನು ಚಿತ್ರದುರ್ಗ ಡೈರಿಗೆ ಸಾಗಿಸುವುದು. ಮತ್ತು ಎ ಮತ್ತು ಬಿ ಎರಡು ಮಾರ್ಗಗಳಿಗೆ ಪ್ರತ್ಯೇಕವಾಗಿ ದರ ನಮೂದಿಸುವುದು.
5. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ ವಾಹನಕ್ಕೆ ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದವತಿಯಿಂದ ನೀಡಲಾಗುವುದಿಲ್ಲ.
6. ಹಾಲು ಶೇಖರಣಾ ವಾಹನಗಳು 2005 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ ಮಾಡಲು 2006 ರ ಅಥವಾ ನಂತರದ ಸಾಲಿನ ಇನ್ಸುಲೇಟೆಡ್ ಬಾಡಿಯುಳ್ಳ ಮಾಡೆಲ್ ಆಗಿರಬೇಕು. ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
7. **ಟೆಂಡರ್ ದರ ಒಪ್ಪಿಗೆಯಾದ ಕೂಡಲೇ ಹಾಲು ಸಾಗಾಣಿಕೆ ವಾಹನವನ್ನು FSSAI ಲೈಸನ್ಸ್/ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.** ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸ್‌ಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು.
8. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
9. ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
10. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
11. ಹಾಲು ಶೇಖರಣೆ ಮಾರ್ಗಗಳಲ್ಲಿ ಬರುವ ಕೆಲವು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಬಿ.ಎಂ.ಸಿ. ಗಳನ್ನು ಅಳವಡಿಸಿ ಪ್ರಾರಂಭಿಸಲಾಗುತ್ತಿದೆ. ಬಿ.ಎಂ.ಸಿ. ಕೇಂದ್ರವು ಪ್ರಾರಂಭವಾದ ಕೂಡಲೇ ಅಂತಹ ಹಾಲು ಶೇಖರಣೆ ಮಾರ್ಗವನ್ನು ಸ್ಥಗಿತಗೊಳಿಸಲಾಗುವುದು. ಅಥವಾ ಮಾರ್ಗವನ್ನು ಅವಶ್ಯಕತೆಗೆ ತಕ್ಕಂತೆ ಪರಿಷ್ಕರಿಸಲಾಗುವುದು. ಈ ಷರತ್ತಿಗೆ ಬದ್ದರಾದ ವಾಹನ ಮಾಲೀಕರು/ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.
12. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
13. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ/ಮಾರುಕಟ್ಟೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

ಸಹಿ/-

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 06.06.2017
ಸ್ಥಳ : ಮಾಚೇನಹಳ್ಳಿ